ಸಿಂಹ ಆರಾಮಾಗಿ ಅಧಿಕಾರ ಚಲಾಯಿಸುತ್ತಾ ಮಲಗಿರುತ್ತದೆ. ಹೆಣ್ಣು ಸಿಂಹ, ನದಿಯ ದಂಡೆಯಲ್ಲೋ, ಕೆರೆಯ ಅಂಚಿನಲ್ಲೋ ಮರೆಯಲ್ಲಿ ಕಾದು ಕುಳಿತಿದ್ದು ನೀರು ಕುಡಿಯಲು ಬರುವ ಅಮಾಯಕ ಜಿಂಕೆ, ಕಡವೆಗಳ ಗೋಣು ಮುರಿದು ಎಳೆದು ತಂದು ಇವುಗಳ ಮುಂದೆ ಹಾಕುತ್ತದೆ. ಗಂಡು ಮಾತ್ರ ಬೀಜಕ್ಕೆ ಬಿಟ್ಟ ಹೋರಿ ಗುಟುರು ಹಾಕುವಂತೆ ಇಡೀ ಕಾಡೇ ನಡುಗುವಂತೆ ಜೋರಾಗಿ ಘರ್ಜಿಸಿ ರುಚಿ ನೋಡುವಂತೆ ತನಗೆ ಬೇಕಾದಷ್ಟು ತಿಂದು ಎದ್ದು ಹೋಗುತ್ತದೆ.

ಆಮೇಲೆ ಬೇಟೆಯಾಡಿ ತಂದ ಸಿಂಹಿಣಿ ತಿನ್ನಬೇಕು! ಇದೆಂಥ ಪ್ರಕೃತಿ ನಿಯಮ ಅಂತ ಅರ್ಥವೇ ಆಗುವುದಿಲ್ಲ. ಅದೇನು ಪ್ರೀತಿಯೋ, ಆಕ್ರಮಣದ ಭೀತಿಯೋ. ಆದರೆ ನಮ್ಮ ಹಟ್ಟಿಯ ಗಂಡಸರು ಮಾತ್ರ ಹೆಂಡತಿ ಹೀಗೆ ತಂದು ಹಾಕಲಿಲ್ಲವೆಂದರೆ, ಗಂಟಲು ಮಟ್ಟ ಕುಡಿದು, ಆರ್ಭಟಿಸಿ, ಹೆಂಡತಿಯರ ಸೀರೆಯನ್ನೆಲ್ಲ ಹರಿದು, ತಾಳಿಯನ್ನು ಕಿತ್ತುಕೊಂಡು ಹೋಗಿ ಯಾರಿಗಾದರೂ ಅಡವಿಟ್ಟಾದರೂ ಸರಿ, ಮತ್ತಷ್ಟು ಕುಡಿದು ವಾಲಾಡುತ್ತ ಬಂದು ತೆಪ್ಪಗೆ ಬಿದ್ದುಕೊಳ್ಳುತ್ತಾರೆ. ಅದಕ್ಕೇ ಇರಬೇಕು, ನಮ್ಮ ಸ್ತ್ರೀವಾದಿಗಳೆಲ್ಲ ಗಂಡಸರ ವಿರುದ್ಧ ಆರ್ಭಟಿಸುವುದು. ಮನುಷ್ಯನ ವಿಕಾಸದ ಹಾದಿಯನ್ನು ಗಮನಿಸಿದರೂ, ಒಂದೆಡೆ ನೆಲೆನಿಲ್ಲುವ, ಬೀಜ ತೆಗೆದು, ಸಸಿ ಮಾಡಿ, ಅದರಿಂದ ಫಲವನ್ನು ಪಡೆಯುವ ಆವಿಷ್ಕಾರವನ್ನು ಮಾಡಿದವಳು ಹೆಣ್ಣೇ. ಕೃಷಿಪದ್ಧತಿ ಜಾರಿಗೆ ಬಂದುದು ಇಂಥ ಹೊಸದನ್ನು ಕಂಡುಹಿಡಿದುದರಿಂದಲೇ. ಆಕೆ ಹಾಗೆ ಕೂಡಿಟ್ಟ ಧಾನ್ಯವನ್ನು ಕಷ್ಟಕಾಲಕ್ಕೆ ಬೇಕಾದೀತೆಂದು ಸಂರಕ್ಷಿಸಿ ಇಡುತ್ತಾಳೆ. ಗಂಡು ಹಾಗಲ್ಲ, ಕಾಡು ಪ್ರಾಣಿಯ ಹಾಗೆ, ಈಗ ಹೊಟ್ಟೆ ತುಂಬಿದರೆ ಮುಗಿಯಿತು, ಮತ್ತೆ ಹಸಿವಾದಾಗ ನೋಡಿಕೊಳ್ಳೋಣವೆಂದು ಅಲೆಮಾರಿಯಂತೆ ಅಂಡಲೆಯುತ್ತಲೇ ಇರುತ್ತಾನೆ. ಅದಕ್ಕೇ ಹೇಳುವುದು, ಹೆಣ್ಣು ನಿಜಕ್ಕೂ ಗಂಡಿಗಿಂತ ಬುದ್ಧಿವಂತೆ ಎಂದು. ಅದಕ್ಕೇ ಅಂಥ ಗಂಡಿಸಿಗೊಂದು ಗೂಟ ಹಾಕಿ ನಿಯಂತ್ರಿಸಬೇಕೆಂದು ಈ ಮದುವೆಯೆಂಬ ಪದ್ಧತಿ ಜಾರಿಗೆ ಬಂದಿರಬೇಕು! ಹಾಗಾದರೆ ಸ್ಥಾವರನಾದ ನಾನು ಎಲ್ಲಿ ಎದ್ದು ಓಡಿಹೋಗಿಬಿಡುತ್ತೇನೆಂದು ನನಗೂ ಈ ಬೇವಿನಮರವನ್ನು ತಂದು ಗಂಟುಹಾಕಿದರು?

ಕೊಂಬೆ–7

ನಾನು ಕೇವಲ ಯಾವುದೋ ಒಂದು ವಿಷಯ ಕುರಿತು ಮಾತಾಡುತ್ತಿದ್ದೇನೆಂದರೆ ಬೇರೆ ಅಂಶಗಳೆಲ್ಲ ತಟಸ್ಥವಾಗಿವೆ ಅಂತ ಅರ್ಥವಲ್ಲ. ನಾನು ಬಯಲಲ್ಲಿ ಕುಳಿತು ಶೂನ್ಯವನ್ನು ದೃಷ್ಟಿಸುತ್ತಿರುವಂತೆ ನಿಮಗೆ ಅನ್ನಿಸದಿರದು. ನನ್ನ ಭಾವಕೋಶದಲ್ಲಿ ನೂರಾರಲ್ಲ, ಸಾವಿರಾರೂ ಅಲ್ಲ, ಲಕ್ಷಾಂತರ ನೆನಪುಗಳು ಬುತ್ತಿ ಹಿಡಕೊಂಡು ನಿಂತಿರುತ್ತವೆ. ಯಾವ ಕ್ಷಣಕ್ಕೆ ಯಾವುದು ನೆನಪಾಗುತ್ತದೋ ಅದರತ್ತ ನನ್ನ ನೋಟವನ್ನು ಹರಿಸುತ್ತೇನಷ್ಟೇ. ಹಾಗಂತ ಉಳಿದದ್ದೆಲ್ಲ ಗೌಣವೆಂದುಕೊಳ್ಳಬೇಕಿಲ್ಲ. ನನಗೆ ನೀವು ಮನುಷ್ಯರು ಆತ್ಮಕಥೆ ಬರೆಯುವಂತೆ ಒಂದೊಂದೇ ಎಳೆಯನ್ನು ಹಿಡಿದುಕೊಂಡು ಬರುವುದಕ್ಕೆ ನಿಮ್ಮಂತೆ ನನಗೆ ಒಂದೇ ಒಂದು ಮೆದುಳಿಲ್ಲ. ನನ್ನ ಮೈಕೈಯಲ್ಲಷ್ಟೇ ಅಲ್ಲ, ಇಡೀ ರೆಂಬೆ, ಕೊಂಬೆ, ಎಲೆ, ಕಾಂಡ, ತಾಯಿಬೇರು, ಕುಡಿಬೇರುಗಳು ಸೇರಿ ಸಂಪೂರ್ಣ ನನ್ನ ದೇಹದ ತುಂಬಾ ಮೆದುಳಿನ ನರನಾಡಿಗಳು ಹರಡಿಹೋಗಿವೆ. ಹಾಗಾಗಿ ಯಾವುದರ ಪ್ರಭಾವ ಜಾಸ್ತಿಯಾಗುವುದೋ ಅದರ ಕಡೆ ನನ್ನ ಗಮನ ಹರಿಯುತ್ತದಷ್ಟೇ.

ಆದರೆ ಅದೇ ವೇಳೆ ನನ್ನ ಮೇಲೆ ಹೀಗೆ ಬಂದು ಕೂತು, ಹಾಗೆಯೇ ಹಾರಿ ಹೋಗುವುದರಿಂದ ಹಿಡಿದು, ಗೂಡು ಕಟ್ಟಿಕೊಳ್ಳುವ ಪಕ್ಷಿಗಳು, ಈ ಗೂಡುಗಳನ್ನು ತಮಗೆ ಪ್ರತಿಸ್ಪರ್ಧಿಯೆಂದುಕೊಂಡು ಕೆಡಿಸಲೆಂದೇ ಬರುವ ಕಾಗೆಗಳು, ಆ ಕಾಗೆಗಳ ಗೂಡಿನಲ್ಲೇ ಅವುಗಳಿಗರಿವಿಲ್ಲದಂತೆ ಬಂದು ಮೊಟ್ಟೆಯಿಟ್ಟು ಹೋಗುವ ಕೋಗಿಲೆಗಳು, ಹೀಗೆ ಮೊಟ್ಟೆ ಇಟ್ಟು ಮರಿ ಮಾಡುವ, ಅದಕ್ಕೆ ಪೂರಕವಾಗಿ ಗಂಡು ಹೆಣ್ಣು ಎರಡೂ ಪರಸ್ಪರ ಸಂವಾದಿಸುತ್ತ, ಆ ಮರಿಗಳಿಗೆಂದು ಆಹಾರದ ಗುಕ್ಕು ನುಂಗಿ ಗಂಟಲಲ್ಲಿಟ್ಟುಕೊಂಡು ತಂದು ಕೊಕ್ಕಿನಿಂದ ಕಕ್ಕಿ ಮರಿಗೆ ತಿನ್ನಿಸುವುದರಿಂದ ಹಿಡಿದು, ಅವು ರೆಕ್ಕೆ ಬಲಿಯುವ ಮೊದಲೇ ಹಾರಲು ಹೋಗಿ ಕೆಳಗೆ ಬೀಳುವವರೆಗೆ, ಬೀಳುತ್ತ ಬೀಳುತ್ತಲೇ ಹಾರುವುದನ್ನು ಕಲಿಯುವವರೆಗೆ; ಅವುಗಳನ್ನು ಹುಡುಕಿಕೊಂಡು ನನ್ನ ಬುಡವನ್ನಾಶ್ರಯಿಸುತ್ತ ವಾಸನೆ ಹಿಡಿದು ಹೆಜ್ಜೆಗಳಿಲ್ಲದಿದ್ದರೂ ಕಳ್ಳಹೆಜ್ಜೆಯಲ್ಲಿ ಮೇಲೇರಿ ಬರುವ ಹಾವುಗಳು, ಆ ಹಾವನ್ನೆತ್ತಿಕೊಂಡುಹೋಗಿ ತನ್ನ ಹೊಟ್ಟೆ ತುಂಬಿಸಿಕೊಳ್ಳಲು ಮೈಲುದ್ದದಷ್ಟು ಎತ್ತರದಿಂದಲೇ ಕಣ್ಣು ಹಾಕಿ ಅಪಹರಿಸಲು ಹಾತೊರೆಯುವ ಹದ್ದು, ಗರುಡಗಳು; ಒಡೆದ ಮೊಟ್ಟೆಯ ಲೋಳೆಯನ್ನು ಹೀರಲು ಬರುವ ಸಾಲು ಸಾಲು ಇರುವೆ ಗೊದ್ದಗಳು, ಆಹಾರವನ್ನೆತ್ತಿಕೊಂಡು ಶಿಸ್ತಿನ ಸಿಪಾಯಿಗಳಂತೆ ಹೋಗಿ ಮಳೆಗಾಲಕ್ಕೆ ಬೇಕೆಂದು ತಮ್ಮ ಗೂಡಿನಲ್ಲಿ ಸಂಗ್ರಹಿಸಿಡುವ ಇರುವೆಗಳು, ಎಂತೆಂಥವೋ ಹೆಸರು ಗೊತ್ತಿಲ್ಲದ ಕ್ರಿಮಿ ಕೀಟಗಳು ಹುಳುಗಳೆಲ್ಲ ನನ್ನ ಮೈಮೇಲೆ ಸದಾ ಹರಿದಾಡುತ್ತಲೇ ಇರುತ್ತವೆ. ಹೀಗೆ ಒಂದೇ ಎರಡೇ ನನ್ನ ಮುಂದಿನ ಪ್ರಕ್ರಿಯೆಗಳು. ಈಗ ಮನುಷ್ಯನ ಬಗ್ಗೆ ಮಾತಾಡುವಾಗ ಅವನ ಸಾಧನೆಗಳ ಬಗ್ಗೆ, ಉಪಟಳಗಳ ಬಗ್ಗೆ, ಸಣ್ಣತನದ ಬಗ್ಗೆ, ದೊಡ್ಡಸ್ತಿಕೆಯ ಬಗ್ಗೆ ಮಾತಾಡುತ್ತೇನೆಯೇ ವಿನಾ ಅವನು ಒಂದ ಮಾಡಲು ಹೋದದ್ದನ್ನು, ಎರಡಕ್ಕೆ ಹೋದದ್ದನ್ನು ಮುಂತಾದ ಅತಿ ಸಹಜ ಪ್ರಕ್ರಿಯೆಗಳ ಬಗ್ಗೆ ಹೇಳಲು ಹೋಗುವುದಿಲ್ಲವಲ್ಲ ಹಾಗೆ... ಅವೆಲ್ಲ ನೀವೇ ಊಹಿಸಿಕೊಂಡುಬಿಡಬೇಕಷ್ಟೇ.

ಎರಡಕ್ಕೆ ಎಂದಾಗ ನೆನಪಾಯಿತು. ಈಗಲೇ ಹೇಳಿಬಿಡುತ್ತೇನೆ. ಮೂಲ ಕಾಳಿಂಗನ ನಂತರದ ಐದನೇ ತಲೆಮಾರಿನ ಕಾಳಿಂಗಯ್ಯನ ಕಾಲದ್ದು. ಆಗಿನ್ನೂ ಸ್ವಾತಂತ್ರ್ಯಕ್ಕಾಗಿ ಸಿಕ್ಕಾಪಟ್ಟೆ ಹೋರಾಟ ನಡೆಯುತ್ತಿತ್ತು. ಆ ಕಡೆ ಗಾಂಧಿ, ಈ ಕಡೆ ಸುಭಾಸ್ ಚಂದ್ರ ಭೋಸ್, ಅತ್ತ ಸಾವರ್ಕರ್, ಇತ್ತ ಅಂಬೇಡ್ಕರ್... ಮುಂತಾದ ನೂರಾರು ನಾಯಕರು ಒಬ್ಬೊಬ್ಬರೂ ಒಂದೊಂದು ಕಡೆಯಿಂದ ಬ್ರಿಟಿಷ್ ಸರ್ಕಾರಕ್ಕೆ ತಲೆನೋವಾಗಿ ಪರಿಣಮಿಸಿದ್ದರು.

ಆಗ ಕಾಳಿಂಗಯ್ಯನ ಮನೆಯ ಆ ಕಡೆಯ ಪಕ್ಕದಲ್ಲಿ ಒಬ್ಬ ಡಾಕ್ಟರನಿದ್ದ. ಡಾಕ್ಟರು ಎಂದರೆ ಈಗಿನ ಕಾಲದ ಎಂಬಿಬಿಎಸ್, ಎಂಡಿ ಮಾಡಿದ ಗುರುಪಾದಯ್ಯನಂಥ ಡಾಕ್ಟರಲ್ಲ. ಅವರ ತಾತ, ಗುರುಪಾದಪ್ಪ ಅಂತಲೇ ಆತನ ಹೆಸರು. ಕಾಳಿಂಗನ ಮೊಮ್ಮಗ ಕಾಳಿಂಗಪ್ಪ, ಅವನ ಮೊಮ್ಮಗ ಕಾಳಿಂಗಯ್ಯ, ಅವನ ಮೊಮ್ಮಗ ಕಾಳಿಂಗೇಗೌಡ ಇರುವಂತೆ ಗುರುಪಾದಯ್ಯನ ತಾತ ಗುರುಪಾದಪ್ಪ. ಆತ ಅಳಲೇಕಾಯಿ ಪಂಡಿತ. ಎಲ್ಲದಕ್ಕೂ ಒಂದೇ ಅಳಲೇಕಾಯಿಯನ್ನು ಬೇರೆ ಬೇರೆ ರೂಪದಲ್ಲಿ ಕೊಟ್ಟು ಕಾಯಿಲೆ ಗುಣಪಡಿಸುವಂಥವನು. ಅಷ್ಟೋತ್ತಿಗಾಗಲೇ ನನ್ನ ಸುತ್ತ ನೂರರ ಸುಮಾರಿಗೆ ಮನೆಗಳು ವಿಸ್ತರಿಸಿದ್ದವು. ಯಾರಾದರೂ ಹುಷಾರಿಲ್ಲ ಎಂದು ಬಂದರೆ, ಮುಂಗೈನ ನಾಡಿಯನ್ನು ಹಿಡಿದೇ ಇಂತಿಂಥ ಕಾಯಿಲೆ ಎಂದು ಹೇಳಿಬಿಡುತ್ತಿದ್ದ. ಅದಕ್ಕೆ ತಕ್ಕನಾದ ಗಿಡಮೂಲಿಕೆಗಳಿಂದ ತಯಾರಿಸಿದ ಔಷಧಿ ಕೊಟ್ಟು ಕಳಿಸುತ್ತಿದ್ದ. ಆತನ ಕೈಗುಣ ಎಷ್ಟು ಚೆನ್ನಾಗಿತ್ತೆಂದರೆ ಅವನಿಂದ ಮುಟ್ಟಿಸಿಕೊಂಡು ಹೋದ ಎರಡೇ ದಿನಕ್ಕೆ ಎಲ್ಲರೂ ಹುಷಾರಾಗಿಬಿಡುತ್ತಿದ್ದರು. ಆದರೆ ನಾನೀಗ ಹೇಳಲು ಹೊರಟಿರುವುದು ಕೆಲವೊಂದು ಕಾಯಿಲೆಗಳಿಗೆ ಆತ ಮಲಮೂತ್ರ ಪರೀಕ್ಷೆ ಮಾಡುತ್ತಿದ್ದುದರ ಬಗ್ಗೆ.

ಆಗೆಲ್ಲ ಈಗಿನಂತೆ ಲ್ಯಾಬೊರೇಟರಿಗಳಿರಲಿಲ್ಲವಲ್ಲ. ಮೂತ್ರವನ್ನು, ಮಲವನ್ನು ಡಬ್ಬಿಯಲ್ಲಿ ಹಾಕಿಕೊಂಡು ಯಾರೂ ತಂದುಕೊಡುತ್ತಿರಲಿಲ್ಲ. ಅಥವಾ ಅದನ್ನು ಯಾರೂ ಮುಟ್ಟಿ ಪರೀಕ್ಷೆ ಮಾಡುವ ಸ್ಥಿತಿಯಲ್ಲಿಯೂ ಇರಲಿಲ್ಲ. ಅದಕ್ಕೆ ಗುರುಪಾದಪ್ಪನೇ ಬೆಳಗ್ಗೆ ಎದ್ದು, 'ಎಲ್ಲಿ ಎಲ್ಡಕ್ಕೆ ಹೋಗಿದ್ದೆ ಬಾ ತೋರಿಸು' ಎಂದು ಕರೆದೊಯ್ಯುತ್ತಿದ್ದ. ಆಗೆಲ್ಲ ರಾಜರ ಮನೆಯಂತೆ ಗುಂಡಿಯ ಮೇಲೆಲ್ಲ ಕಲ್ಲುಚಪ್ಪಡಿ ಹಾಕಿ, ಅದರ ಮಧ್ಯೆ ಇರುವ ದುಂಡನೆಯ ತೂತಿನಲ್ಲಿ ಹೇತು, ಅದು ಒಂದು ಮಂಕರಿಯಲ್ಲಿ ಬೀಳುವಂತೆ ಮಾಡಿ, ಮನೆಯವರದೆಲ್ಲ ಮುಗಿದ ಮೇಲೆ ಹೊಲೆಮಾದಿಗರು ಅದನ್ನು ತಲೆಯ ಮೇಲೆ ಹೊತ್ತುಕೊಂಡು, ಮೈಮೇಲೆಲ್ಲ ಸೋರಿಸಿಕೊಂಡು ಊರಾಚೆಯ ಬಯಲಿಗೆ ಹೋಗಿ ಬಿಸಾಡಿ ಬರುವಂತಿರಲಿಲ್ಲ. ಎಲ್ಲೋ ಗೌಡನ ಮನೆಯವರು ಮಾತ್ರ ತಮ್ಮ ಹಿತ್ತಲಿನ ತಿಪ್ಪೆಯಲ್ಲೇ ವಿಸರ್ಜಿಸಿ, ಆಮೇಲೆ ಆಳುಗಳು ಕೊಟ್ಟಿಗೆಯನ್ನು ಸ್ವಚ್ಛಗೊಳಿಸಲು ಬಂದು ಅದರ ಮೇಲೊಂದು ಬುಟ್ಟಿ ಸಗಣಿ ತೊಪ್ಪೆಯನ್ನು ಹಾಕಿ ಮುಚ್ಚಿ ಕಾಣೆಯಾಗದಂತೆ ಮಾಡುತ್ತಿದ್ದರು. ಆದರೆ ಸಾಮಾನ್ಯ ಜನರು ಊರಾಚೆಯಿದ್ದ ಪೊದೆಗಳ ಮರೆಯಲ್ಲಿ ಒಂದು ಹಾಳಿತ್ತಲು ಅಂತ ಮಾಡಿಕೊಂಡಿರುತ್ತಿದ್ದರು. ಅದರಲ್ಲಿ ಊರಿನ ಸಕಲೆಂಟು ಜನರೂ ಹೋಗಿ ಕಕ್ಕಸ್ಸು ಮಾಡಿ ಬರುತ್ತಿದ್ದರು.

ಗಂಡಸರು ಹೆಂಗಸರು ಎಂಬ ಭೇದವಿಲ್ಲದೇ ಎಲ್ಲರೂ ಅಲ್ಲೇ ಹೋಗಬೇಕಿದ್ದರೂ ವಯಸ್ಸಿಗೆ ಬಂದ ಹುಡುಗಿಯರು ನಾಚಿಕೊಳ್ಳುತ್ತಿದ್ದುದರಿಂದ